**ಇಂದು ದಿನಾಂಕಃ 05-11-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ RMV ವಕೀಲರಿಂದಃ-**

ನಾನು ಬಿ.ಕಾಂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ತಾರೀಕು, ತಿಂಗಳು ಮತ್ತು ವರ್ಷ ಅರ್ಥವಾಗುತ್ತದೆ. ಈ ಪ್ರಕರಣ ದಾಖಲಾಗುವ ಮೊದಲು ನಾನು ಮತ್ತು ಆರೋಪಿ ಸೇಹ್ನಿತರಿದ್ದೇವು ಎಂದರೆ ಸರಿ. ನಾನು ಮತ್ತು ಆರೋಪಿ ಚಂದಾಪುರ ಗ್ರಾಮದವರು ಎಂದರೆ ಸರಿ. ನಾನು ಆರೋಪಿಯ ಕಾರಿನಲ್ಲಿ ಹೋಗಿ ಬರುವುದು ಮಾಡುತ್ತಿದ್ದೇ ಎಂದರೆ ಸಾಕ್ಷಿ ಆರೋಪಿಯ ಕಾರನ್ನು ಬಾಡಿಗೆ ತೆಗೆದುಕೊಂಡು ಹೋಗುತ್ತಿದ್ದೇ ಎಂದು ನುಡಿಯುತ್ತಾರೆ. ನಾನು ಆ್ಯಂಡ್ರೈಡ ಫೋನ ಬಳಸುತ್ತೇನೆ ಮತ್ತು ಅದರಲ್ಲಿ ಫೋನ್ ಪೇ ಮತ್ತು ಗೂಗಲ್ ಪೇ ಇದೆ ಎಂದರೆ ಸರಿ. ಆರೋಪಿಯ ಹತ್ತಿರ ಆ್ಯಂಡ್ರೈಡ ಫೋನ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಆರೋಪಿ ಹಣ ಕಳುಹಿಸುವುದು ಇದ್ದರೇ ಬೇರೆ ಅವರ ಫೋನಿನ ಮುಖಾಂತರ ಕಳುಹಿಸುತ್ತಾರೆ ಎಂದರೆ ಸರಿಯಲ್ಲ.

ಚೆಕ್ SBI ಬ್ಯಾಂಕನದು ಆಗಿತ್ತು. ಸದರಿ ಚೆಕ್‌ನ ಸಂಖ್ಯೆ 867410 ಇರುತ್ತದೆ. ದಿನಾಂಕ 06-12-2024ರಲ್ಲಿ ರಾಧಾಕೃಷ್ಣರವರು ನನಗೆ 2 ಲಕ್ಷ ರೂಪಾಯಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಹೇಳಿದ ಕಾರಣ ಸದರಿ ರಾಧಾಕೃಷ್ಣರವರು ನನಗೆ 2 ಲಕ್ಷ ರೂಪಯಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 19-12-2023 ರಂದು ಲಕ್ಷ್ಮೀಕಾಂತರವರು ನನಗೆ 1.5 ಲಕ್ಷ ರೂಪಯಿ ಆರೋಪಿ ಹೇಳಿದಕ್ಕೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 16-01-2024ರಂದು ಪ್ರಹ್ಲಾದರವರು ಆರೋಪಿ ಹೇಳಿದ ಕಾರಣ ನನಗೆ ರೂ. 10,000/- ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 01-02-2024ರಂದು ಪ್ರಹ್ಲಾದರವರು ಆರೋಪಿ ಹೇಳಿದ ಕಾರಣ ನನಗೆ ರೂ. 20,000/- ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 19-02-2019ರಂದು ಪ್ರಹ್ಲಾದರವರು ಆರೋಪಿ ಹೇಳಿದ ಕಾರಣ ನನಗೆ ರೂ. 5,000/- ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 02-12-2023ರಂದು ಪ್ರಹ್ಲಾದರವರು ಆರೋಪಿ ಹೇಳಿದ ಕಾರಣ ನನಗೆ ರೂ. 1,000/- ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 06-11-2023ರಂದು ಪ್ರಹ್ಲಾದರವರು ಆರೋಪಿ ಹೇಳಿದ ಕಾರಣ ನನಗೆ ರೂ. 1,000/- ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಕಾರನ್ನು ನಾವು ತೆಗೆದುಕೊಂಡು ಹೋಗಿ ಅದನ್ನು ಜಕ್ಕಂ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ತಮ್ಮ ಕಾರನ್ನು ನನ್ನ ಹತ್ತಿರ ರೂ. 1,20,000/- ಹಣಕ್ಕೆ ನನ್ನ ಹತ್ತಿರ ಇಟ್ಟಿದ್ದರು ಮತ್ತು ಅದನ್ನು ನಾನು ಬಳಸಿ ಜಕ್ಕಂ ಮಾಡಿ ರಿಪೇರಿ ಖರ್ಚನ್ನು ಆರೋಪಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ನ್ಯಾಯಾಲಯದ ಮುಂದೆ ನನಗೆ 3 ಲಕ್ಷ ರೂಪಾಯಿ ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನನಗೆ ಒಟ್ಟು ರೂ. 7,66,000/- ನೀಡಿರುತ್ತಾರೆ ಎಂದರೆ ಸಾಕ್ಷಿ 3 ಲಕ್ಷ ರೂಪಾಯಿ ಮಾತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಾಗುವ ಮೊದಲು ಆರೋಪಿ ನನಗೆ ರೂ. 3,50,000/- ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ಪಡೆದರು ಸಹ ಆರೋಪಿಗೆ ಸತಾಯಿಸಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1ರ ಚೆಕ್ಕನ್ನು ಆರೋಪಿ ನನಗೆ ಕೊಟ್ಟಿಲ್ಲ ಮತ್ತು ನಾನು ಅದನ್ನು ಆರೋಪಿಯ ಮಗನಿಂದ ಪಡೆದಿದ್ದೇನೆ ಎಂದರೆ ಸರಿಯಲ್ಲ. ಬಡ್ಡಿ ವ್ಯವಹಾರ ಮಾಡಲು ಸರಕಾರದಿಂದ ಪರವಾನಿಗೆ ಪಡೆದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಬಡ್ಡಿ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸರಕಾರಕ್ಕೆ ಆದಾಯ ತೆರಿಗೆ ಭರಿಸಿರುವುದಿಲ್ಲ.

ಆರೋಪಿ ಚಂದಾಪುರದಲ್ಲಿರುವ ಹಾಸ್ಟೇಲನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಪ್ರತಿ ತಿಂಗಳು ರೂ. 30,000/- ರೂಪಾಯಿ ಸಂಬಳವಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ ಸೇರಿದ 2 ಕೋಟಿ ಬೆಲೆ ಬಾಳುವ ಮನೆ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿ LIC ಏಜೆಂಟ್ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಚಂದಾಪುರದಲ್ಲಿ ತಮ್ಮ ಆದಾಯದಿಂದ ಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಆರೋಪಿಯ ತಂದೆ ಮೊದಲು ಇದೆ ನ್ಯಾಯಾಲಯದಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಕುಟುಂಬಸ್ಥರ ಮೇಲೆ ಈ ಪ್ರಕರಣ ಬಿಟ್ಟು ಬೇರೆ ಯಾವುದೇ ಪ್ರಕರಣ ಇಲ್ಲ ಎಂದರೆ ಸಾಕ್ಷಿ ನನಗೆ ಕೊಟ್ಟಿರುವ ಚೆಕ್ ಮಾನ್ಯ ಆಗದೇ ಇರುವ ಕಾರಣ ಪ್ರಕರಣವನ್ನು ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ.

ಆರೋಪಿಗೆ ಸತಾಯಿಸಲು ಎಲ್ಲಾ ಹಣ ಪಡೆದರು ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಗನ ಹೆಸರು ಭಗವಂತ ಇರುತ್ತಾನೆ ಎಂದರೆ ಸರಿ. ನನ್ನ ಜೊತೆ ಆರೋಪಿಯ ಮಗನಾದ ಭಗವಂತ ವ್ಯವಹಾರ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಭಗವಂತ ಈತನು ಬೆಂಗಳೂರಿನಲ್ಲಿ ಕೆಲಸ ಮಾಡಿ ಪ್ರಹ್ಲಾದ ಮತ್ತು ಲಕ್ಷ್ಮೀಕಾಂತರವರಿಂದ ಹಣ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**